# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2018–19ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ "National Mission on Sustainable Agriculture" (NMSA) ಯೋಜನೆಯಡಿಯ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮಕ್ಕೆ (RAD) 2014–15, 2015–16, 2016–17 ಮತ್ತು 2017–18ನೇ ಸಾಲುಗಳಲ್ಲಿ ಉಳಿಕೆಯಾಗಿದ್ದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ**
1. ಸರ್ಕಾರದ ಆದೇಶ ಸಂಖ್ಯೆ: ಕೃಇ 64 ಕೃಉಇ 2018, ದಿನಾಂಕ: 27.07.2018.
2. ದಿನಾಂಕ: 23.04.2018 ರಂದು ನಡೆದ ಎನ್.ಎಮ್.ಎಸ್.ಎ–ಆರ್.ಎ.ಡಿ., ಯೋಜನಾ ಮಂಜೂರಾತಿ ಸಮಿತಿ ಸಭೆ ನಡವಳಿ.
3. ಕೃಷಿ ಆಯುಕ್ತರ ಪತ್ರ ಸಂ: ಉಕೃನಿ/ರಾನಿಪ್ರ/NMSA-RAD/ಅಬಿ/2018–19, ದಿನಾಂಕ: 09.01.2019.

**ಪ್ರಸ್ತಾವನೆ:**

2018–19ನೇ ಸಾಲಿನ ಆಯವ್ಯಯ ಸಂಪುಟ–3ರಲ್ಲಿ ಕೇಂದ್ರ ಪುರಸ್ಕೃತ "National Mission on Sustainable Agriculture" (NMSA) ಯೋಜನೆಗೆ ಲೆಕ್ಕ ಶೀರ್ಷಿಕೆ: 2401–00–108–1–16ರಡಿ ರೂ. 6065.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ, ಕೇಂದ್ರ ಪುರಸ್ಕೃತ "National Mission on Sustainable Agriculture" (NMSA) ಯೋಜನೆಯಡಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ (RAD) ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಕೇಂದ್ರದ ಪಾಲಿನ ಅನುದಾನ ರೂ. 553.99 ಲಕ್ಷಗಳಿಗೆ ಪೂರಕವಾಗಿ ರಾಜ್ಯದ ಪಾಲಿನ ಅನುದಾನ ರೂ. 369.326 ಲಕ್ಷಗಳನ್ನು ಸೇರಿಸಿ ಒಟ್ಟಾರೆ ರೂ. 923.316 ಲಕ್ಷಗಳನ್ನು ಬಿಡುಗಡೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (2)ರ ದಿನಾಂಕ: 24.03.2018ರಂದು ನಡೆದ "National Mission on Sustainable Agriculture" (NMSA) ಯೋಜನೆಯಡಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ (RAD). ಕಾರ್ಯಕ್ರಮದ ಯೋಜನಾ ಮಂಜೂರಾತಿ ಸಮಿತಿ ಸಭೆಯಲ್ಲಿ, ಹಿಂದಿನ ಸಾಲಿನಲ್ಲಿ ಎನ್.ಎಮ್.ಎಸ್.ಎ.– ಆರ್.ಎ.ಡಿ. ಕಾರ್ಯಕ್ರಮದಡಿ ಬಿಡುಗಡೆಯಾಗಿ ಬಳಕೆಯಾಗದೆ ಉಳಿದ ಹಣವನ್ನು ಮುಂದಿನ ಸಾಲಿನಲ್ಲಿ ಉಪಯೋಗಿಸಲು ಪ್ರತ್ಯೇಕ ಆದೇಶಗಳ ಅವಶ್ಯಕತೆಯಿರುವುದಿಲ್ಲವೆಂದು ನಿರ್ಣಯಿಸಲಾಗಿದೆ.

ಮೇಲೆ ಓದಲಾದ (3)ರ ಕೃಷಿ ಆಯುಕ್ತರ ಪತ್ರದಲ್ಲಿ 2018–19ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ "National Mission on Sustainable Agriculture" (NMSA) ಯೋಜನೆಯಡಿಯ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ (RAD) ಕಾರ್ಯಕ್ರಮದಡಿ 2014–15, 2015–16, 2016–17 ಹಾಗೂ 2017–18ನೇ ಸಾಲುಗಳಲ್ಲಿ ಬಿಡುಗಡೆಯಾಗಿ ಬಳಕೆಯಾಗದೆ ಉಳಿಕೆಯಾಗಿದ್ದ ಅನುದಾನ ರೂ. 141.665 ಲಕ್ಷಗಳ ಅನುದಾನವನ್ನು 2018–19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2401–00–108–1–16ರಡಿ ಲಭ್ಯವಿರುವ ಅನುದಾನದಿಂದ ಈ ಕೆಳಕಂಡಂತೆ ಜಲಾನಯನ ಅಭಿವೃದ್ಧಿ ಇಲಾಖೆಗೆ ಬಿಡುಗಡೆ ಮಾಡುವಂತೆ ಕೋರಲಾಗಿದೆ.

| ಕ್ರ.ಸಂ. | ಘಟಕ | ಒಟ್ಟು (ರೂ. ಲಕ್ಷಗಳಲ್ಲಿ) |
|---|---|---|
| 1 | 106 | 92.362 |
| 2 | 422 | 19.259 |
| 3 | 423 | 30.044 |
| | ಒಟ್ಟು | **141.665** |

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ್ದು, 2018–19ನೇ ಸಾಲಿನಲ್ಲಿ NMSA-RAD ಯೋಜನೆಯಡಿ ಮರುಮೌಲ್ಯೀಕೃತ ಅನುದಾನ ರೂ. 141.665 ಲಕ್ಷಗಳ ಪೈಕಿ ಲೆಕ್ಕ ಶೀರ್ಷಿಕೆ: 2401–00–108–1–106 ಅಡಿ ಹಾಲಿ ಲಭ್ಯವಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ; ಕೃಇ 64 ಕೃಉಇ 2018, ಬೆಂಗಳೂರು, ದಿನಾಂಕ: 21.03.2019.**

ಕೇಂದ್ರ ಪುರಸ್ಕೃತ "National Mission on Sustainable Agriculture" (NMSA) ಯೋಜನೆಯಡಿ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ (RAD) ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, 2014–15, 2015–16, 2016–17 ಹಾಗೂ 2017–18ನೇ ಸಾಲುಗಳಲ್ಲಿ ಬಿಡುಗಡೆಯಾಗಿ ಬಳಕೆಯಾಗದೆ ಉಳಿಕೆಯಾಗಿದ್ದ ಅನುದಾನ **ರೂ. 133.466 ಲಕ್ಷಗಳನ್ನು** (ಒಂದು ನೂರ ಮೂವತ್ತ ಮೂರು ಲಕ್ಷದ ನಲವತ್ತಾರು ಸಾವಿರದ ಆರು ನೂರು ರೂಪಾಯಿಗಳು ಮಾತ್ರ) 2018–19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ: 2401–00–108–1–16 ಅಡಿ ಉಪ ಶೀರ್ಷಿಕೆವಾರು ಈ ಕೆಳಕಂಡಂತೆ ಬಿಡುಗಡೆ ಮಾಡುತ್ತಾ, ಸದರಿ ಅನುದಾನವನ್ನು ಮಾರ್ಗಸೂಚಿನಯನ್ವಯ ಘಟಕವಾರು, ವರ್ಗವಾರು ನಿಗಧಿತ ಪ್ರಮಾಣದಲ್ಲಿ ಹಂಚಿಕೆ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

| ಕ್ರ.ಸಂ. | ಘಟಕ | ಒಟ್ಟು (ರೂ. ಲಕ್ಷಗಳಲ್ಲಿ) |
|---|---|---|
| 1 | 106 | 92.362 |
| 2 | 422 | 19.259 |
| 3 | 423 | 21.845 |
| | **ಒಟ್ಟು** | **133.466** |

ಸದರಿ ಬಿಡುಗಡೆ ಮಾಡಲಾದ ಅನುದಾನವನ್ನು ಕೃಷಿ ಇಲಾಖೆಯು ಜಲಾನಯನ ಅಭಿವೃದ್ಧಿ ಇಲಾಖೆಯ CCO ಗೆ ನೀಡಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಅನುಮೋದಿಸಿದೆ.

ಕೃಷಿ ನಿರ್ದೇಶಕರು/ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೇಂದ್ರ ಸರ್ಕಾರವು "National Mission on Sustainable Agriculture" (NMSA) ಯೋಜನೆಯಡಿಯ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ (RAD) ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ/02/ಟಿಎಫ್‌ಪಿ/2018, ದಿನಾಂಕ: 03.04.2018ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದ ಮೇರೆಗೆ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಕೃಇ 24 ಆಂಆಸ 2019, ದಿನಾಂಕ: 11.03.2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

21/03/19

ಇವರಿಗೆ:–

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು–01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಆಯುಕ್ತರು,/ ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
9. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ- 4&5), ಆರ್ಥಿಕ ಇಲಾಖೆ, ಬೆಂಗಳೂರು
12. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
13. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.